**ಓ ಎಸ್ 87/2024 ಡಿಡಬ್ಲ್ಯೂ.2**

**ಸಾಕ್ಷಿಯನ್ನು ದಿಃ 03.08.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಕೆ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ಮತ್ತು ಐಟಿಐ ಓದಿದ್ದೇನೆ. ನಾನು ಕ್ರಯಕ್ಕೆ ಪಡೆದಿರುವ ನಿವೇಶನದ ಮಾಲೀಕರಾಗಿದ್ದ ನಾಗಣ್ಣರವರನ್ನು ನಾನು ನೋಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಕಮಲಮ್ಮನವರನ್ನು ಮೊದಲನೇ ಹೆಂಡತಿ ಎಂದು ಬರೆಸಿರುವುದು ತಪ್ಪಾಗಿರಬಹುದು, ನಾಗಣ್ಣರವರಿಗೆ ಕಮಲಮ್ಮರವರು ಒಬ್ಬರೇ ಹೆಂಡತಿ.

ನಾನು ಕ್ರಯಕ್ಕೆ ಪಡೆದಿರುವ ಸ್ವತ್ತಿನಲ್ಲಿ ಒಂದು ವಾಸ ಯೋಗ್ಯವಲ್ಲದ ಮನೆ ಹಾಗೂ ಶೆಡ್ಡು ಇತ್ತು. ನಾನು ಬರೆಸಿಕೊಂಡ ಕ್ರಯಪತ್ರದಲ್ಲಿ ಸ್ವತ್ತನ್ನು ನಿವೇಶನ ಎಂದು ಬರೆಸಿದ್ದೇನೆ, ಮನೆ ಮತ್ತು ಶೆಡ್ಡನ್ನು ಬರೆಸಿಲ್ಲ. ನಾನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ನಾಗಣ್ಣರವರ ಹೆಸರಿನಲ್ಲಿದ್ದ ಖಾತಾ ಎಕ್ಸಟ್ರಾಕ್ಟ್ ನ್ನು ಪಡೆದುಕೊಂಡಿದ್ದೇನೆ. ಆ ಸ್ವತ್ತಿನಲ್ಲಿದ್ದ ವಾಸ ಯೋಗ್ಯವಲ್ಲದ ಮನೆ ಮತ್ತು ಶೆಡ್ಡಿನಲ್ಲಿ ಮೊದಲು ಯಾರು ವಾಸ ಮಾಡುತ್ತಿದ್ದರು ಎಂಬ ಬಗ್ಗೆ ನಾನು ವಿಚಾರ ಮಾಡಿದ್ದೇನೆ. 2015 ಕ್ಕಿಂತ ಮೊದಲನೆಯವರೆಗೂ ನಾಗಣ್ಣರವರು ಆ ಮನೆ ಮತ್ತು ಶೆಡ್ಡಿನಲ್ಲಿ ವಾಸ ಇದ್ದು ಆನಂತರ ಅದರಲ್ಲಿ ಯಾರೂ ವಾಸವಿಲ್ಲವೆಂದು ಹೇಳಿದ್ದರು. ಈಗಲೂ ಸಹ ಆ ಸ್ವತ್ತಿನಲ್ಲಿ ವಾಸ ಯೋಗ್ಯ ಮನೆ ಮತ್ತು ಶೆಡ್ಡು ಇದ್ದು ಅದರಲ್ಲಿ ವಾದಿ ಹಾಗೂ ವಾದಿಯ ತಾಯಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಾಗಣ್ಣರವರು ವಾಸ ಮಾಡುತ್ತಿದ್ದಾಗ ಮತ್ತು ಆನಂತರವೂ ಸಹ ಆ ಮನೆ ಹಾಗೂ ಶೆಡ್ಡಿಗೆ ವಿದ್ಯುತ್ ಸಂಪರ್ಕ ಇಲ್ಲ. ವಾದಿಯ ತಾಯಿ ಆ ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಂಡು ಈಗಲೂ ಸಹ ವಾಸ ವಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಶೆಡ್ಡಿಗೆ ಸಂಬಂಧಿಸಿದ ವಿದ್ಯುತ್ ಮೀಟರ್ ರಮೇಶ ಎಂಬುವವರ ಹೆಂಡತಿ ರಾಜೇಶ್ವರಿ ಎಂಬುವವರ ಹೆಸರಿನಲ್ಲಿ ಇದೆ ಎಂದರೆ

ಸರಿಯಲ್ಲ.

ನಿಶಾನೆ ಡಿ 15 ರಲ್ಲಿನ ಪುಟ ಸಂಖ್ಯೆ 2 ರಲ್ಲಿ ಬರೆದಿರುವ ಧರ್ಮಕುಮಾರಿ ಬಿನ್ ಲೇಟ್ ಎಂ ವಿ ನಾಗಣ್ಣ ಎಂದರೆ ನಾಗಣ್ಣರವರ ಮಗಳು. ಲಾವಣ್ಯ ಮತ್ತು ಪವನ್ ಗೌಡರವರಿಗೆ ಎಂ ಎನ್ ಎಂಬ ಇನ್‌ಷಿಯಲ್ ಇದ್ದು ಧರ್ಮಕುಮಾರಿರವರಿಗೆ ಯಾವುದೇ ಇನ್‌ಷಿಯಲ್ ಇಲ್ಲದೆ ಇದ್ದರೂ ಸಹ ಅವರು ಎಂ ವಿ ನಾಗಣ್ಣರವರ ಮಗಳೇ ಆಗಿದ್ದಾರೆ. ಹೀಗೆಯೇ, ವಾದಿಯ ಹೆಸರಿನ ಇನ್‌ಷಿಯಲ್ ತಪ್ಪಾಗಿದ್ದರೂ ಸಹ ಆಕೆಯೂ ಎಂ ವಿ ನಾಗಣ್ಣರವರ ಮಗಳೇ ಆಗಿದ್ದಾಳೆ ಎಂದರೆ ಸರಿಯಲ್ಲ. ನಿಶಾನೆ ಡಿ 15 ರಲ್ಲಿ ನಮೂದಿಸಿರುವ ಕ್ರಯದ ಮೊಬಲಗು ರೂ. 24,75,000/- ಹಣವನ್ನು ನಗದು ರೂಪದಲ್ಲಿಯೇ ಪಾವತಿ ಮಾಡಿದ್ದೇನೆ. 2024 ರಲ್ಲಿ ಅಷ್ಟು ಹಣವನ್ನು ನಗದು ರೂಪದಲ್ಲಿ ಪಾವತಿ ಮಾಡಲು ಅವಕಾಶ ಇಲ್ಲದೆ ಇರುವ ಕಾರಣ ನಾನು ಅಷ್ಟು ಹಣವನ್ನು ಪಾವತಿ ಮಾಡದೆ ಇದ್ದರೂ ಸಹ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ವಾದಿಯ ಸ್ವಾಧೀನಾನುಭವದಲ್ಲಿರುವ ಮನೆ ಮತ್ತು ನಿವೇಶನವನ್ನು ಹೊಡೆದುಕೊಳ್ಳಬೇಕೆಂಬ ಕಾರಣದಿಂದ ನಾನು ಹಾಗೂ 1 ರಿಂದ 5 ನೇ ಪ್ರತಿವಾದಿಗಳು ಪರಸ್ಪರ ಷರೀಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**